ಆ) ನೂತನ ತಾಲ್ಲೂಕುಗಳ ರಚನೆಗೆ ಯಾವ ಯಾವ ಮಾನದಂಡಗಳನ್ನು ಅನುಸರಿಸಲು ಸರ್ಕಾರ ನಿರ್ಧರಿಸಿದೆ;

ಇ) ತಾಲ್ಲೂಕು ರಚನೆಯ ಸಂಬಂಧವಾಗಿ ಜಸ್ಟೀಸ್ ಕುಲದೀಪ್‌ಸಿಂಗ್ ಸಮಿತಿ ನೀಡಿರುವ ವರದಿಯ ಪ್ರಮುಖ ಅಂಶಗಳೇನು;

ಈ) ಬಹಳ ವರ್ಷಗಳಿಂದಲೂ ಇದು ಪ್ರಕ್ರಿಯೆ ಹಂತದಲ್ಲಿದ್ದು ನೂತನ ತಾಲ್ಲೂಕು ರಚನೆಯ ನಿರ್ಧಾರದ ವಿಳಂಬಕ್ಕೆ ಕಾರಣಗಳೇನು; ಒಟ್ಟು ಎಷ್ಟು ಹೊಸ ತಾಲ್ಲೂಕುಗಳನ್ನು ಮತ್ತು ಎಂದು ರಚಿಸಿ ಘೋಷಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಇಲ್ಲ

ಆ) ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವಾಗ ಆಡಳಿತಾತ್ಮಕ ಅನುಕೂಲತೆ, ಸಾರ್ವಜನಿಕ ಹಿತಾಸಕ್ತಿ, ಕಾನೂನು ಮತ್ತು ಸುವ್ಯವಸ್ಥೆ ಆ ಪ್ರದೇಶದ ಸಾಮಾಜಿಕ ಹಾಗೂ ಕೈಗಾರಿಕಾ ಅಭಿವೃದ್ಧಿ ಇತ್ಯಾದಿ ಅಂಶಗಳನ್ನು ಮಾನದಂಡಗಳೆಂದು ನಿರ್ಧರಿಸಬೇಕಾಗುತ್ತದೆ.

ಇ) ತಾಲ್ಲೂಕು ರಚನೆ ಸಂಬಂಧವಾಗಿ ಸರ್ಕಾರವು ಜಸ್ಟೀಸ್ ಕುಲದೀಪ್‌ಸಿಂಗ್ ಸಮಿತಿ ರಚಿಸಿರುವುದಿಲ್ಲ.

ಈ) ಈಗ ಕೇಂದ್ರ ಸರ್ಕಾರವು ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣಾ ಕಾರ್ಯವು ಪೂರ್ಣಗೊಳ್ಳುವವರೆಗೆ ಆಡಳಿತಾತ್ಮಕ ಘಟಕಗಳ ಸ್ಥಾನ ಎಲ್ಲೆಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ನಿರ್ಬಂಧ ವಿಧಿಸಿರುವ ಹಿನ್ನೆಲೆಯಲ್ಲಿ ಹೊಸ ತಾಲ್ಲೂಕುಗಳ ರಚನೆಯ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗಿರುವುದಿಲ್ಲ.

829(984) ಶ್ರೀ ಸಂಗಮೇಶ್ವರ ಬಿ. ಕೆ. (ಭದ್ರಾವತಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಜಲಾಶಯದ (ಡ್ಯಾಂ) ಪ್ರದೇಶದಲ್ಲಿ KRS ಮಾದರಿಯಲ್ಲಿ ಉದ್ಯಾನವನ ಸಂಗೀತ ಕಾರಂಜಿಯನ್ನು ನಿರ್ಮಾಣ ಮಾಡಿ ಪ್ರವಾಸೋದ್ಯಮ ಕೇಂದ್ರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಪುರಾತನ ಶ್ರೀಲಕ್ಷ್ಮೀನರಸಿಂಹ ದೇವಾಲಯವಿರುವ ಭದ್ರಾವತಿಯನ್ನು ಪ್ರವಾಸಿ ಕೇಂದ್ರವಾಗಿರಿಸಿ, ಭದ್ರಾ ಅಭಯಾರಣ್ಯ, ಶೃಂಗೇರಿ, ಹೊರನಾಡು, ಕೆಮ್ಮಣ್ಣು ಗುಂಡಿ, ಅಮೃತಾಪುರ, ಷಹಾಜಿರಾವ್ ಬೋಸ್ಲೆಯವರ ಸಮಾಧಿ (ಚನ್ನಗಿರಿ ತಾಲ್ಲೂಕು) ಸೊಳೇಕೆರೆ (ಶಾಂತಿಸಾಗರ) ಇವುಗಳನ್ನು ಸಂದರ್ಶಿಸುವ ಪ್ಯಾಕೇಜ್ ಪ್ರವಾಸ ಪ್ರಾರಂಭಿಸಲಾಗುವುದೇ;

ಇ) ಹಾಗಿದ್ದಲ್ಲಿ, ಶಿವಮೊಗ್ಗ ಜಿಲ್ಲಾ ಪ್ರವಾಸೋದ್ಯಮ ಇಲಾಖೆ (ಜಿಲ್ಲಾಧಿಕಾರಿಗಳು ಶಿವಮೊಗ್ಗ) ಯವರು ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸಿರುತ್ತಾರೆಯೆ (ವಿವರ ನೀಡುವುದು)?

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಇಲ್ಲ,

ಆ) ಪ್ರವಾಸಿಗರ ಸಂಖ್ಯೆಯನ್ನು ಆದರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಇಲ್ಲ.